# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2014-15ನೇ ಸಾಲಿನಲ್ಲಿ ಕೃಷಿ ಇಲಾಖೆಯ ರಾಜ್ಯವಲಯ ಚಾಲ್ತಿಯೋಜನೆಗಳಿಗೆ ಮೂರನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಕೃಇ/45/ಕೃಯೋಕಾ/2014, ದಿನಾಂಕ:11-04-2014.
2. ಸರ್ಕಾರದ ಆದೇಶ ಸಂಖ್ಯೆ:ಕೃಇ/48/ಕೃಯೋಕಾ/2014, ದಿನಾಂಕ:09-05-2014.
3. ಸರ್ಕಾರದ ಆದೇಶ ಸಂಖ್ಯೆ:ಕೃಇ/48/ಕೃಯೋಕಾ/2014, ದಿನಾಂಕ:21-07-2014.
4. ಸರ್ಕಾರದ ಆದೇಶ ಸಂಖ್ಯೆ:ಕೃಇ/48/ಕೃಯೋಕಾ/2014, ದಿನಾಂಕ:11-08-2014.
5. ಕೃಷಿ ನಿರ್ದೇಶಕರ ಪತ್ರ ಸಂಖ್ಯೆ: ಪಿಎಲ್ಎನ್/ತಾಂ-1/ ಅನುದಾನಬಿಡುಗಡೆ/2014-15 ದಿನಾಂಕ:20/21-10-2014.
6. ಸರ್ಕಾರದ ಆದೇಶ ಸಂಖ್ಯೆ: FD 05 TFP 2014, ದಿನಾಂಕ:14.10.2014.

**ಪ್ರಸ್ತಾವನೆ:**

ಮೇಲೆ ಓದಲಾದ (1)ರಲ್ಲಿನ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನಲ್ಲಿ ಕೃಷಿ ಇಲಾಖೆಯ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2014-15ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಕೃಷಿ ಇಲಾಖೆಯ 2014-15ನೇ ಸಾಲಿನಲ್ಲಿನ ಚಾಲ್ತಿಯೋಜನೆಗಳಿಗೆ ಮೊದಲನೇ ತ್ರೈಮಾಸಿಕ ಅನುದಾನವಾಗಿ ರೂ.21282.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3)ರ ಪ್ರಸ್ತಾವನೆಯಲ್ಲಿ ಕೃಷಿ ಇಲಾಖೆಯ ಹಂಗಾಮು ಆಧಾರಿತ ಮೂರು ಯೋಜನೆಗಳಿಗೆ Vote on account limit (1/3) ಸೀಮಿತಗೊಳಿಸಿ ಒಟ್ಟು ರೂ.6221.87 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4)ರ ಆದೇಶದಲ್ಲಿ ಕೃಷಿ ಇಲಾಖೆಯ 2014-15ನೇ ಸಾಲಿನಲ್ಲಿನ ಚಾಲ್ತಿಯೋಜನೆಗಳಿಗೆ ಎರಡನೇ ತ್ರೈಮಾಸಿಕ ಅನುದಾನವಾಗಿ ರೂ.14644.77 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5)ರ ಪತ್ರದಲ್ಲಿ 2014-15ನೇ ಸಾಲಿನಲ್ಲಿ ಚಾಲ್ತಿ ಯೋಜನೆಗಳಡಿ ಮುಂದುವರೆಸಲಾಗಿರುವ 07 ಯೋಜನಾ ಕಾರ್ಯಕ್ರಮಗಳಿಗೆ ಮೂರನೇ ತ್ರೈಮಾಸಿಕದ ಅನುದಾನ ಒಟ್ಟು ರೂ. 21074.56 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೃಷಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (6)ರ ಆದೇಶದನ್ವಯ ರಾಜ್ಯ ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಮೂರನೇ ಕಂತನ್ನು ಬಿಡುಗಡೆ ಮಾಡಲು ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೃಷಿ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಗಣಿಸಲು ನಿರ್ಧರಿಸಲಾಯಿತು. ಅದರಂತೆ ಈ ಆದೇಶ.

..2..

**ಸರ್ಕಾರದ ಆದೇಶ ಸಂಖ್ಯೆ: ಕೃಇ/48/ಕೃಯೋಕಾ/2014, ಬೆಂಗಳೂರು, ದಿನಾಂಕ: 07.11.2014.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆಗಳಲ್ಲಿ ರಾಜ್ಯವಲಯದ 7 ಯೋಜನೆಗಳಿಗೆ ಒಟ್ಟು **ರೂ. 21074.56 ಲಕ್ಷಗಳನ್ನು (ಇಪ್ಪತ್ತೊಂದು ಸಾವಿರದ ಎಪ್ಪತ್ತಾನಾಲ್ಕು ಲಕ್ಷದ ಐವತ್ತಾರು ಸಾವಿರ ರೂಪಾಯಿಗಳು ಮಾತ್ರ)** ಮೂರನೇ ತ್ರೈಮಾಸಿಕಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ. 2014-15ನೇ ಸಾಲಿನ ಮೂರನೇ ತ್ರೈಮಾಸಿಕದಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆ ರಾಜ್ಯವಲಯ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಯೋಜನೆ | ಲೆಕ್ಕ ಶೀರ್ಷಿಕೆ | ಒದಗಿಸಿರುವ ಆಯವ್ಯಯ | ಮೊದಲನೇ ತ್ರೈಮಾಸಿಕಕ್ಕೆ ದಿ: 09-05-2014 ರಲ್ಲಿ ಬಿಡುಗಡೆ ಯಾಗಿರುವ ಅನುದಾನ | Vote-on-Account Limit ಪ್ರಕಾರ ಬಿಡುಗಡೆ ಗೊಳಿಸಿದ ಮೊತ್ತ | ಎರಡನೇ ತ್ರೈಮಾಸಿಕಕ್ಕೆ ಬಿಡುಗಡೆ ಯಾಗಿರುವ ಅನುದಾನ | ಈ ಆದೇಶದ ಮೂಲಕ ಮೂರನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿರುವ ಅನುದಾನ |
|---|---|---|---|---|---|---|---|
| 1 | ಕೃಷಿ ನಿರ್ದೇಶನಾಲಯ | 2401-00-001-1-01 | 2897.50 | 724.38 | | 724.37 | 724.38 |
| 2 | ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ | 2401-00-103-0-15 | 55392.41 | 13848.10 | 4616.04 | 9232.06 | 13848.10 |
| 3 | ಸಾವಯವ ಕೃಷಿ | 2401-00-104-0-12 | 900.00 | 225.00 | | 225.00 | 225.00 |
| 4 | ಬೇಸಾಯ ಸಂಬಂದಿತ ಚಟುವಟಿಕೆಗಳು | 2401-00-109-0-21 | 9270.00 | 2317.50 | 772.50 | 1545.00 | 2317.50 |
| 5 | ಇತರೆ ಕೃಷಿ ಯೋಜನೆಗಳು | 2401-00-800-1-40 | 20000.00 | 960.00 | | 544.17 | 752.08 |
| 6 | ರಾಜ್ಯ ಯೋಜನೆಗಳು | 4401-00-001-1-01 | 2830.00 | 707.50 | | 707.50 | 707.50 |
| 7 | ವಿಸ್ತೃತ ನೀರಾವರಿ ಯೋಜನೆ | 2401-00-108-1-15 | 10000.00 | 2500.00 | 833.33 | 1666.67 | 2500.00 |
| | ಒಟ್ಟು | | **101289.91** | **21282.48** | **6221.87** | **14644.77** | **21074.56** |

ಮೇಲ್ಕಂಡ ಯೋಜನೆಗಳಿಗೆ ಇದುವರೆಗೆ ಬಿಡುಗಡೆ ಮಾಡಿರುವ ಹಾಗೂ ಈ ಆದೇಶದ ಮೂಲಕ ಬಿಡುಗಡೆ ಮಾಡಲಾದ ಅನುದಾನವನ್ನು ನಿಗಧಿಪಡಿಸಿದ ಅನುಮೋದಿತ ಕಾರ್ಯಕ್ರಮಗಳಿಗೆ ಸಂಪೂರ್ಣವಾಗಿ ವೆಚ್ಚ ಮಾಡಿ ಶೇ.100 ರಷ್ಟು ಪ್ರಗತಿಯನ್ನು ಸಾಧಿಸತಕ್ಕದ್ದು.

ರಾಜ್ಯವಲಯ ಯೋಜನೆಗಳಡಿ ಆಗಿಂದಾಗ್ಯೆ ಹೊರಡಿಸಲಾಗುವ ಮಾರ್ಗಸೂಚಿಗಳನ್ನು ಅನುಸರಿಸಿ ಕೃಷಿ ಆಯುಕ್ತರು ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/05/ಟಿಎಫ್‌ಪಿ/2014, ದಿನಾಂಕ:14-10-2014 ರಂತೆ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಟಿಪ್ಪಣಿ ಸಂ:ಕೃಇ/69/ಆಂಆಸ/2014, ದಿನಾಂಕ:30-10-2014 ರಲ್ಲಿನ ಸಹಮತಿಯ ಮೇರೆಗೆ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

7/11/14

**(ಜ್ಯೋತಿ.ಆರ್.ಜೆ),**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ (ಯೋಜನೆ).**

ಪ್ರತಿಯನ್ನು:-

1 ) ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.

2) ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5) ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
6) ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು
7) ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
9) ಸರ್ಕಾರಧ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
10) ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ (ಕೃಷಿ ಸೇವೆ).
11) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
12) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
13) ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
14) ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
15) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ಮಾಹಿತಿಗಾಗಿ ನೀಡಲಾಗಿದೆ.(ಕೃಷಿ ಆಯುಕ್ತರ ಮುಖಾಂತರ).
16) ಶಾಖಾಧಿಕಾರಿ, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.
17) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.